## ನಾವೇ ಭಾಗ್ಯವಂತರು

ಕನ್ನಡ ಎಲ್ಲ ಖಾಸಗಿ ಸುದ್ದಿ ವಾಹಿನಿಯವರು ಪುನೀತ್ ರಾಜ್‌ಕುಮಾರ್ ಹುಟ್ಟು ಹಬ್ಬದ ದಿನದಂದು ಅಭಿಮಾನಿಗಳ ಭರಪೂರ ಅಭಿಮಾನವನ್ನು ಪ್ರಚುರಪಡಿಸಿದರು. ನಾಡಿನ ಉದ್ದಗಲಕ್ಕೂ ಅಭಿಮಾನಿಗಳು ಸಿನಿಮಾ ವೀಕ್ಷಿಸಲು ಮುಗಿಬಿದ್ದದ್ದು ಪುನೀತ್ ಅವರ ವ್ಯಕ್ತಿತ್ವಕ್ಕೆ ತೋರಿದ ಗೌರವ. ಪುನೀತ್ ರಾಜ್‌ಕುಮಾರ್ ಬದುಕಿದ್ದಾಗ ಎಲ್ಲರಂತೆ ಒಬ್ಬ ನಟ ಎಂದು ಅನೇಕರು ಭಾವಿಸಿದ್ದರು.

'ಶರಣರ ಬಾಳನ್ನು ಮರಣದಲ್ಲಿ ಕಾಣು' ಎನ್ನುವ ಹಾಗೆ ಅವರ ಸಮಾಜಮುಖಿ ಕಾರ್ಯಗಳ ಬಗೆಗಿನ ಬದ್ಧತೆ ಅವರ ಅಸ್ತಂಗತದ ನಂತರ ಅನಾವರಣಗೊಂಡಿತು. ಸಿನಿರಸಿಕರಿಗೆ ಅಷ್ಟೇ ಸೀಮಿತವಾಗಿದ್ದ ಅವರ ವ್ಯಕ್ತಿತ್ವ ಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಯಿತು. ನಾವು ಮಾತನಾಡಬಾರದು ನಮ್ಮ ಕೆಲಸ ಕಾರ್ಯಗಳು ಮಾತಾಡಬೇಕು ಎನ್ನುವ ಹಾಗೆ ಬದುಕಿದ ಪುನೀತ್ ರಾಜ್‌ಕುಮಾರ್ ಅವರ ಶ್ರೀಮಂತ ಹೃದಯ ಅವರ ನಗುಮೊಗದ ದ್ಯೋತಕವಾಗಿತ್ತು. ಅವರ ಸಮಕಾಲೀನರಾಗಿದ್ದ ನಾವೇ ಭಾಗ್ಯವಂತರು. ಅವರ ಬಗ್ಗೆ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿ ಖಾಸಗಿ ಸುದ್ದಿ ವಾಹಿನಿಗಳು ತಮ್ಮ ಘನತೆಯನ್ನ ಹೆಚ್ಚಿಸಿಕೊಂಡವು. ಅವರು ನಿಧನರಾದ ದಿನದಿಂದ ಇಂದಿನವರೆಗೂ ಪುನೀತ್ ಕೈಂಕರ್ಯಗಳನ್ನು ಅವರ ಸಮಾಜಮುಖಿ ಕಾರ್ಯಗಳನ್ನು ಬೆಳಕಿಗೆ ತಂದವರಿಗೆ ಅಭಿನಂದನೆಗಳು.

—ಮಲ್ಲಿಕಾರ್ಜುನ, ಸುರಧೇನುಪುರ

## ರಂಜನೀಯ ಡ್ರಾಮಾ ಜೂನಿಯರ್ಸ್

ಝೀ ಕನ್ನಡ ವಾಹಿನಿಯಲ್ಲಿ ಡ್ರಾಮಾ ಜೂನಿಯರ್ಸ್ ಸೀಸನ್ 4 ಶುರುವಾಗಿದೆ. ಮೂರು ಸೀಸನ್‌ಗಳನ್ನೂ ಯಶಸ್ವಿಯಾಗಿ ಪೂರೈಸಿದ ಈ ಡ್ರಾಮಾ ರಿಯಾಲಿಟಿ ಶೋ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಕುಳಿತು ನೋಡಿ ಆಸ್ವಾದಿಸುವಂಥ ಕಾರ್ಯಕ್ರಮ. ಕಿರುತೆರೆಯಲ್ಲಿ ರಂಗಭೂಮಿಯ ಪರಿಕಲ್ಪನೆಯನ್ನು ತಂದು ಮಕ್ಕಳಲ್ಲಿ ನಾಟಕದ ಅಭಿರುಚಿ ಮೂಡಿಸುವ ಈ ರಿಯಾಲಿಟಿ ಶೋ ರಾಜ್ಯದ ನಟನಾ ಆಸಕ್ತ ಮಕ್ಕಳಿಗೆ ಸೂಕ್ತ ವೇದಿಕೆ ಒದಗಿಸುತ್ತಿದೆ. ವಾರಾಂತ್ಯದಲ್ಲಿ ಎರಡು ದಿನ ಮಕ್ಕಳಿಗೂ ಸಮಯ ಕಳೆಯಲು, ಮನರಂಜನೆ ಪಡೆಯಲು ಇಂಥ ಕಾರ್ಯಕ್ರಮ ಅಗತ್ಯವೂ ಹೌದು. ಈ ಬಾರಿ ಕ್ರೇಜಿಸ್ಟಾರ್ ರವಿಚಂದ್ರನ್ ತೀರ್ಪುಗಾರರಾಗಿ ಬಂದಿದ್ದಾರೆ. ಜೂಲಿ ಲಕ್ಷ್ಮಿ ಅವರ ಜೊತೆಗೆ ಪ್ರಬುದ್ಧ ನಟರೂ ಸೇರಿರುವುದರಿಂದ ನಾಟಕದ ಕಳೆ ಮತ್ತಷ್ಟು ಹೆಚ್ಚಲಿದೆ. ಅಲ್ಲದೆ ರಚಿತಾರಾಮ್ ಕೂಡ ಇದ್ದು ಮಾಸ್ಟರ್ ಆನಂದ್ ನಿರೂಪಣೆಯಲ್ಲಿ ಸೊಗಸಾಗಿ ವಿಜೃಂಭಿಸುವುದು ಈ ರಿಯಾಲಿಟಿ ಶೋ ವೈಶಿಷ್ಟ್ಯ.

ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಟೀವಿ ವಾಹಿನಿ ಹೊರಗೆಡಹುವುದು ಅಲ್ಲದೆ ರಾಜ್ಯದಾದ್ಯಂತ ಮನೆಮಂದಿಯೆಲ್ಲ ಕುಳಿತು ನೋಡಲು ಸಾಧ್ಯವಾಗುವುದು ಒಳ್ಳೆಯ ಪ್ರಯತ್ನವೇ ಎನ್ನಬಹುದು.

—ವಿನಾಯಕ ಅನಂತ ಹೆಗಡೆ, ಬೆಂಗಳೂರು

**ವಾರದ ಪತ್ರ**

## ಕುಡಿತದ ದೃಶ್ಯಕ್ಕೆ ಕಡಿವಾಣವಿರಲಿ

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ರಾಮಾಚಾರಿ' ಎಲ್ಲಾ ವಯೋಮಾನದವರ ಮೆಚ್ಚುಗೆ ಗಳಿಸಿದೆ. ಆದರೆ ಕಳೆದ ಗುರುವಾರ ಪ್ರಸಾರವಾದ ಸಂಚಿಕೆಯಲ್ಲಿ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಕುಡಿತ–ಮೋಜನ್ನು ಪಾರ್ಟಿ ರೂಪದಲ್ಲಿ ತೋರಿಸಿದ್ದು ನಮಗೆ ಸರಿ ಕಾಣಲಿಲ್ಲ.

ಚಾರುಲತಾಳ ಮೊದಲನೆಯ ಸಂಬಳದಲ್ಲಿ ಪಾರ್ಟಿ ರೂಪದಲ್ಲಿ ಸುಮಾರು ಮೂವತ್ತಕ್ಕೂ ಅಧಿಕ ಮಂದಿಗೆ ಕುಡಿಸಿ ತೂರಾಡುವ ದೃಶ್ಯವನ್ನು ತೋರಿಸುವ ಅಗತ್ಯವೇನಿತ್ತು? ಹಾಗಾದರೆ ಚಾರುಲತಾಳ ತಿಂಗಳ ಸಂಬಳವೆಷ್ಟು? ದಿನ ಪತ್ರಿಕೆ, ಟೀವಿಗಳಲ್ಲಿ ಯುವಕರಿಗೆ ಕುಡಿತ, ಡ್ರಗ್ಸ್‌ನಿಂದ ದೂರವಿರಿ ಎಂದು ಜಾಗೃತಿ ಪ್ರಚಾರ ಮಾಡುತ್ತಿದ್ದಾರೆ. ಆದರೆ, ಇದರಲ್ಲಿ ಕುಡಿತದ ಸಂದರ್ಭವನ್ನು ಅತಿಯಾಗಿ ತೋರಿಸಿದ್ದು ಸರಿ ಕಾಣಲಿಲ್ಲ. ಇಂತಹ ದೃಶ್ಯಗಳಿಂದ ಧಾರಾವಾಹಿಯ ಗುಣಮಟ್ಟ ಕಳೆದುಕೊಳ್ಳುತ್ತದೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಡ್ರಾಮಾ ಜೂನಿಯರ್ಸ್ ಮಿಂಚಲಿ

ಅಸಂಬದ್ಧ, ಅತಾರ್ಕಿಕ, ಅವಾಸ್ತವಿಕ ಧಾರಾವಾಹಿಗಳನ್ನು ನೋಡಿ ಬೇಸತ್ತಿದ್ದ ಮನಸ್ಸಿಗೆ ಮುದನೀಡಲು ಕಪ್ಪು ಮೋಡದಲ್ಲೊಂದು ಬೆಳ್ಳಿ ಗೆರೆಯಂತೆ ಡ್ರಾಮಾ ಜೂನಿಯರ್ಸ್ ಸೀಜನ್–4 ಮತ್ತೆ ಆರಂಭಗೊಂಡಿದೆ. ಕನ್ನಡ ಸಾಹಿತಿಗಳ ಸಣ್ಣ ಕತೆಗಳಿಗೆ ಡ್ರಾಮಾ ಜೂನಿಯರ್ಸ್ ಶೋನಲ್ಲಿ ಪ್ರಾಮುಖ್ಯತೆ ಸಿಗಲಿದೆ ಎನ್ನುವುದು ಸ್ವಾಗತಾರ್ಹ. ಧಾರಾವಾಹಿಯ ನಿರ್ಮಾಪಕರು ಮಾಡದಿರುವ ಕೆಲಸವನ್ನು ಡ್ರಾಮಾ ಜೂನಿಯರ್ಸ್ ನಿರ್ಮಾಪಕರು ಮಾಡುತ್ತಿರುವುದು ಶ್ಲಾಘನೀಯ.

ಕನ್ನಡ ಚಾನಲ್‌ಗಳಲ್ಲಿ ಮಕ್ಕಳ ಕಾರ್ಯಕ್ರಮಗಳೇ ಅಪರೂಪವಾಗಿರುವ ಇಂದಿನ ಸಂದರ್ಭದಲ್ಲಿ ಡ್ರಾಮಾ ಜೂನಿಯರ್ಸ್ ಶೋ ಪ್ರತಿಭಾವಂತ ಮಕ್ಕಳಿಗೆ ಒಂದು ಉತ್ತಮವಾದ ವೇದಿಕೆ. ಕಳೆದ ಮೂರು ಸೀಜನ್‌ಗಳಲ್ಲಿ ವಿಜೃಂಭಿಸಿದಂತೆ ನಾಲ್ಕನೆಯ ಸೀಜನ್ ವಿಜೃಂಭಿಸಲಿ

—ಮುರಲೀಧರ ಕುಲಕರ್ಣಿ, ಬೀದರ್

## ಮರಳುಗಾಡಿನಲ್ಲಿ ಓಯಸಿಸ್

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ದಾಸ ಪುರಂದರ' ತುಂಬಾ ಉತ್ತಮವಾಗಿದೆ. ಇದರ ನಿರ್ದೇಶನ, ಕಲಾವಿದರ ಅಭಿನಯ ಮತ್ತು ಸಂಭಾಷಣೆ ಚೆನ್ನಾಗಿದೆ. ಇತ್ತೀಚೆಗೆ ಪ್ರಸಾರವಾಗುತ್ತಿರುವ ಅತಿ ಅಬ್ಬರದ ಸೇಡಿನ ಅತಿರೇಕದ ಕಥೆಗಳನ್ನು ನಿರೂಪಿಸುತ್ತಿರುವ ಧಾರಾವಾಹಿಗಳನ್ನು ನೋಡಿ ಬೇಸತ್ತ ಪ್ರೇಕ್ಷಕರಿಗೆ ಮರಳುಗಾಡಿನಲ್ಲಿ ಓಯಸಿಸ್ ಕಂಡಂತಾಗಿದೆ. ಇದನ್ನು ಸಾಯಂಕಾಲದ ಬದಲು ರಾತ್ರಿ ಒಂಬತ್ತು ಗಂಟೆಯ ನಂತರ ಪ್ರಸಾರ ಮಾಡಿದರೆ ಕುಟುಂಬದ ಎಲ್ಲರೂ ವೀಕ್ಷಿಸಲು ಅನುಕೂಲವಾಗುತ್ತದೆ. ಇಂತಹ ಸದಭಿರುಚಿಯ ಧಾರಾವಾಹಿಗಳನ್ನು ಕಲರ್ಸ್ ಕನ್ನಡ ವಾಹಿನಿ ಇನ್ನಷ್ಟು ನೀಡಲಿ.

—ಶಾಂತಲಾ ರಾಜಗೋಪಾಲ್, ಬೆಂಗಳೂರು

**ಹಳ್ಳ ಹಿಡಿಯುತ್ತಿದೆ:** ಆರಂಭದಲ್ಲಿ ಉತ್ತಮ ಎಂದುಕೊಂಡ ರಾಮಾಚಾರಿ ಧಾರಾವಾಹಿ ಇತ್ತೀಚೆಗೆ ಹಳ್ಳ ಹಿಡಿಯುತ್ತಿದೆ ಅನ್ನಿಸುತ್ತದೆ. ಹಣ್ಣಿನ ರಸ ಹೇಗಿರುತ್ತದೆ ಎಂದು ತಿಳಿಯದವ ಪುರೋಹಿತರ ಹೆಸರಿನಲ್ಲೂ ಹೇಗೆ ನಟಿಸಬಲ್ಲ. ಎಂಬುದನ್ನು ನಿರ್ದೇಶಕರೇ ಹೇಳಬೇಕು. ಚಾರುವಿನ ವರ್ತನೆಯನ್ನು ಪ್ರೇಕ್ಷಕರು ಹೇಗೆ ಸಹಿಸಿಕೊಂಡಾರು? ಇತ್ತೀಚಿನ ಧಾರಾವಾಹಿಗಳೆಂದರೆ ಸೇಡಿನ ತಾಣಗಳು ಎಂದಾಗಿದೆ. ದಯವಿಟ್ಟು ಅರ್ಥಪೂರ್ಣ ಸೌಹಾರ್ದ ಬಿಂಬಿಸುವ ಕಥೆಗಳಿಗೆ ಆದ್ಯತೆ ನೀಡಬೇಕಿದೆ. ಪ್ರೇಕ್ಷಕರೆಂದರೆ ಕೊಟ್ಟಿದ್ದು ತಿನ್ನುವ ಗ್ರಾಹಕ ಎಂದುಕೊಂಡರೆ ತಮ್ಮಂತಹ ಮೂರ್ಖರು ಯಾರೂ ಇಲ್ಲವೆನ್ನಬಹುದು.

—ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

## ಪ್ರೀತಿ ಇಲ್ಲ

ಕಲರ್ಸ್‌ನ 'ಕನ್ನಡತಿ' ಧಾರಾವಾಹಿಯ ನಿರ್ದೇಶಕರೇ ದಯವಿಟ್ಟು ಹಿಂದಿನ ಕಂತು (ಎಪಿಸೋಡ್)ಗಳನ್ನು ಒಮ್ಮೆ ಅವಲೋಕಿಸಿ. ವರೂಧಿನಿ, ಭುವಿಗಿಂತ ಧೈರ್ಯವಂತೆ ಹಾಗೂ ಬುದ್ಧಿವಂತೆ, ತೀಕ್ಷ್ಣ ದೃಷ್ಟಿಯವಳೂ ಎಂದು ಬಿಂಬಿಸಿ, ಈಗ ಬಹಳ ದಡ್ಡಿ ಹಾಗೂ ಏನೂ ಗೊತ್ತಿಲ್ಲವೆಂದು ತೋರಿಸುತ್ತಿದ್ದೀರಿ. ನಮಗೆ ಗೊತ್ತಿರುವ ಹಾಗೆ ಮೂರು, ನಾಲ್ಕು ಸಲ ಹರ್ಷ ನೇರವಾಗಿ ನಾನು ಪ್ರೀತಿಸುವ ಹುಡುಗಿ ನೀನಲ್ಲ ಹೇಳಿದ್ದಾನೆ. ಆದ್ರೂ ನೋಡುಗರನ್ನು ಗೊಂದಲದಲ್ಲಿ ಇಡುವ ಪ್ರಯತ್ನ ಮಾಡಲಾಗುತ್ತಿದೆ. ವರೂಧಿನಿಯ ಪಾತ್ರ ತನ್ನತನ ಕಳೆದುಕೊಳ್ಳುತ್ತಿದೆ.

—ನಾಡಿಗ್ ರಾಮಚಂದ್ರ, ಬೆಂಗಳೂರು